
ಕಿಂಞಣ್ಣ ರೈಗಳ ಸಂಕಲನವನ್ನು ಕೆಲವರು, 'ದಕ್ಷಿಣ ಕನ್ನಡದ ಆದ್ಯ ಪ್ರಗತಿಶೀಲ ಕಥಾಸಂಕಲನ' ಎಂದು ಗುರುತಿಸಿದ್ದಿದೆ. ಶಿವರಾಮ ಕಾರಂತರ ಸಂಕಲನವೂ ಆ ಕೀರ್ತಿಗೆ ಪಾತ್ರವಾಗಬಹುದಾಗಿದೆ. ಆದರೆ ಸಾಮಾನ್ಯವಾಗಿ ಪ್ರಗತಿಶೀಲ ಸಾಹಿತ್ಯ ಚಿಂತನೆಯಲ್ಲಿ ಇವೆರಡನ್ನೂ ಉಲ್ಲೇಖಿಸುವುದು ಕಡಿಮೆಯೆಂದೇ ಹೇಳಬೇಕು.

ವಿಭಜನಪೂರ್ವ ದಕ್ಷಿಣಕನ್ನಡದಲ್ಲಿ 1941ರ ವೇಳೆಗೆ ಪ್ರಗತಿಶೀಲ ಒಲವಿನಿಂದ ಬರೆಯುವ ತರುಣ ಕಥೆಗಾರರ ತಂಡವೇ ಇತ್ತು. ಪೇಜಾವರ ಸದಾಶಿವರಾವ್ (ಪ್ರಗತಿಶೀಲ ಕಥೆ - 'ಜೀವನ ನಿರ್ಮಾಲ್ಯ' 1939), ಪಾ.ವೆಂ. ಆಚಾರ್ಯ, ಕಟಪಾಡಿ ಶ್ರೀನಿವಾಸ ಶೆಣೈ ಮತ್ತು ಎಸ್. ವೆಂಕಟ ರಾಜರಂತಹ ಕೆಲವು ಮುಖ್ಯ ಸಾಹಿತಿಗಳು ಈ ಮಾರ್ಗದಲ್ಲಿ ಕಥೆಗಳನ್ನು ಬರೆದಿದ್ದರು. ಅವರಿಗೆಲ್ಲ ಎಡಪಂಥೀಯ ತಾತ್ವಿಕತೆಯ ಪ್ರಗತಿಶೀಲತೆಯ ಅಧ್ಯಯನಕ್ಕಿಂತ ಹೆಚ್ಚಾಗಿ ಒಂದು ಸಾಮಾನ್ಯವಾದ ನಿಲುವು ಇತ್ತು. ಅದೆಂದರೆ, ಜಮೀನುದಾರರು, ಪುರೋಹಿತಶಾಹಿ ಹಾಗೂ ಬಂಡವಾಳಶಾಹಿಗಳು ಕೂಲಿಕಾರರನ್ನು ಮತ್ತು ಕಾರ್ಮಿಕರನ್ನು ಶೋಷಿಸುವುದನ್ನು ಚಿತ್ರಿಸಿ ಸಾಮಾಜಿಕ ಜಾಗೃತಿಯನ್ನು ಮೂಡಿಸಬೇಕು ಎನ್ನುವುದು. ಬಡವರಾದ ಕಾರ್ಮಿಕರ ಬವಣೆ ಮತ್ತು ದುಃಖಗಳನ್ನು ಮನಮುಟ್ಟುವಂತೆ ಚಿತ್ರಿಸುವುದು ಮಾತ್ರವಲ್ಲದೆ, ಅವರ ಶೋಷಣೆಯ ವಿರುದ್ಧ ಹೋರಾಟಗಳನ್ನು ಸಂಘಟಿಸುವ ಮತ್ತು ಪ್ರತಿಭಟಿಸುವ ಸನ್ನಿವೇಶಗಳನ್ನು ದಾಖಲಿಸುವುದು ಮತ್ತು ಅಂತಹ ಹೋರಾಟಗಳನ್ನು ಬೆಂಬಲಿಸುವುದು ಇದರ ಭಾಗವಾಗಿರುತ್ತದೆ ಎನ್ನುವುದು ಅದಕ್ಕೆ ಪೂರಕ. ಈ ಕಥೆಗಾರರು ಸಮಾಜವನ್ನು ವರ್ಗಗಳಾಗಿ ಗ್ರಹಿಸಿಕೊಂಡು ಹೋರಾಟಗಳನ್ನು ಬೆಂಬಲಿಸುವ ಕಥೆಗಳನ್ನು ಬರೆಯಲಾರಂಭಿಸಿದ ಕಾಲಘಟ್ಟ 1930 – 1940ರ ದಶಕಗಳು.

ಉಡುಪಿಯಲ್ಲಿ ಪ್ರಗತಿಶೀಲ ಸಾಹಿತ್ಯಾಸಕ್ತರ 'ಲಾಸಿಯಮ್' ಎಂಬ ಸಂಘಟನೆಯಿತ್ತು. ಅವರು 1941ರಲ್ಲಿ 'ಕಂಡೂ ಕಾಣದ ನೋಟಗಳು' ಎಂಬ ಪ್ರಗತಿಶೀಲ ಕಥೆಗಳ ಸಂಕಲನವನ್ನು ಪ್ರಕಟಿಸಿದ್ದರು.




ಅದಕ್ಕೆ ಅ.ನ.ಕೃ. ಅವರ ಮುನ್ನುಡಿ ಬರೆದಿದ್ದರು. ಪಾ.ವೆಂ. ಅವರ ಪ್ರಗತಿಶೀಲ ಕಥೆ 'ಘಾತಕ ಜಿಜ್ಞಾಸೆ' ಇದರಲ್ಲಿರುವ ಒಂದು ಕಥೆ. ಅದರಲ್ಲಿ ಮಂಗಳೂರಿನ ಕಯ್ಯಾರ, ನಿರಂಜನ (1924-1985) ಮುಂತಾದವರ ಕಥೆಗಳಿರಲಿಲ್ಲ. ಬಹುಶಃ ಅ.ನ.ಕೃ. ಅವರು ಮತ್ತು ಅವರ ಗುಂಪಿನವರು ಬರೆಯುತ್ತಿದ್ದ ಬಗೆಯ ಸಾಹಿತ್ಯವು ಮಾರ್ಕ್ಸ್‌ವಾದದ ಖಚಿತ ತಿಳಿವಳಿಕೆಯಿಂದ ಬರೆದುದಲ್ಲ ಎಂಬ ಕಾರಣದಿಂದ ನಿರಂಜನರಿಗೆ ಅವರ ಜತೆಗಿದ್ದ ಭಿನ್ನಾಭಿಪ್ರಾಯವೂ ಮಂಗಳೂರಿನವರು ಪ್ರತ್ಯೇಕವಾಗಿದ್ದುದಕ್ಕೆ ಕಾರಣವಾಗಿರಬಹುದು.

ಮಂಗಳೂರಿನಲ್ಲಿ ಕಯ್ಯಾರ ಕಿಂಞಣ್ಣ ರೈ ಮತ್ತು ನಿರಂಜನರು (ಆಗ ಇಬ್ಬರೂ ಅಲ್ಲಿ ಪತ್ರಕರ್ತರಾಗಿ ಕೆಲಸ ಮಾಡುತ್ತಿದ್ದವರು) ಹಾಗೂ ಇತರ ಕಥೆಗಾರರು ಬರೆಯುತ್ತಿದ್ದ ಸಂದರ್ಭದಲ್ಲಿ ಅಂದರೆ 1944ರಲ್ಲಿ ಪ್ರಗತಿಶೀಲ ಸಾಹಿತ್ಯ ಸಂಘ ಪ್ರಾರಂಭವಾಯಿತು. ಕಯ್ಯಾರ ಅವರ ವೈಯಕ್ತಿಕ ಕಥಾ ಸಂಕಲನವು